ಫ್ಲಾಸ್ಕ್ ಹಿಡಿದು, ‘ಅಕ್ಕ ಟೀ, ಅಮ್ಮ ಟೀ, ಬಿಸಿ ಟೀ, ಸ್ಪೆಷಲ್ ಚಾಯ್ ಕುಡೀರಿ ಚಳಿಗೆ ಚೆನ್ನಾಗಿರುತ್ತೆ, ಕೊಡ್ಲಾ’ ಎಂದು ಪೇಪರ್ ಕಪ್‌ನಲ್ಲಿ ಟೀ ಸುರಿದು ಮಾರುತ್ತ ಚಂಪಾಳ ಹತ್ತಿರ ಬಂದು, ‘ಅಕ್ಕ ಟೀ ಕುಡಿ’ ಎಂದು ಒಂದು ಕಪ್ ಕೊಟ್ಟ. ನಿದ್ದೆಯ ಮಂಪರಿನಲ್ಲಿದ್ದ ಚಂಪಾ, ‘ಹೋಗೋ ಯಾರಿಗೆ ಬೇಕು ನಿನ್ನ ಬಣ್ಣದ ಬಿಸಿನೀರು, ಟೀ ಅಂತೆ ಟೀ’ ಎಂದು ಸಿಡಿಮಿಡಿಗೊಂಡಳು.

‘ಏಯ್, ಯಾಕೆ ಹಂಗೆ ಕೋಪ ಮಾಡ್ತಿಯಾ, ನನ್ನ ಟೀ ಅಂದ್ರೆ ಸುಮ್ನೇನಾ, ಈ ಮಾರ್ಕೆಟ್ ನಡೀತಿರೋದೇ ನನ್ನ ಟೀನಿಂದ ಗೊತ್ತಾ. ಒಂದು ದಿನ ನಾನು ಟೀ ಸಪ್ಲೈ ನಿಲ್ಲಿಸಿದ್ರೆ ಪೆಟ್ರೋಲ್ ಇಲ್ಲದ ಗಾಡಿ ತರಹ ನಿಂತು ಹೋಗುತ್ತೆ. ಮೊನ್ನೆ ಮೈ ಸರಿ ಇಲ್ಲ ಅಂತ ಒಂದು ದಿನ ಬರ್ಲಿಲ್ಲ. ಆವತ್ತು ಟೀ ಇಲ್ಲದೆ ಇಲ್ಲಿ ಯಾರಿಗೂ ಬುದ್ಧಿ ಓಡದೆ, ಮಾತು ಮರೆತುಹೋಗಿ ವ್ಯಾಪಾರನೇ ಮಾಡೋಕೆ ಆಗ್ಲಿಲ್ಲ ತಿಳಿತಾ. ಆ ಮೂಲೆ ಅಂಗಡಿ ಲಕ್ಷ್ಮಜ್ಜಿ ‘ಮಗ ನೀನು ಟೀ ಕೊಡಲಿಲ್ಲ ಅಂದ್ರು ಸರಿ ಒಂದು ಸರ್ತಿ ಬೆಳಿಗ್ಗೆ ಟೀ ಟೀ ಅಂತ ಕೂಗಿಬಿಟ್ಟು ಹೋಗು, ಒಳ್ಳೆ ಶಕುನದ ಹಕ್ಕಿ ಶುಭ ಹಾಡಿದ ಹಾಗೆ ಇರುತ್ತೆ ಅಂದ್ಳು.’ ಎಂದ. ಅದಕ್ಕೆ ಚಂಪಾ, ‘ನಿನ್ನ ಹೆಸರು ಮಂಜ ಅನ್ನೋ ಬದಲು ಹುಂಜ ಅಂತ ಬದಲಾಯಿಸಿಕೊ. ಆಗ ಆವಜ್ಜಿಗೆ ದಿನಾ ಕೊಕೊ ಅಂತ ಕೂಗಿ ಏಳಿಸಬಹುದು’ ಎಂದಳು.

‘ಅಬ್ಬಾ, ಏನ್ ಬಾಯಿ ಮಾಡ್ತಾಳೆ ಅಕ್ಕ! ಮನೇಲೂ ಹೀಗೇ ಬರಿ ಬಾಯಿ ಮಾಡ್ತಾಳ ಅಥವಾ ಮನೆ ಕೆಲ್ಸಾನೂ ಮಾಡ್ತಾಳಾ’ ಎಂದು ಅವಳಮ್ಮನತ್ತ ತಿರುಗಿ ಕೇಳಿದ ಮಂಜ. ಅದಕ್ಕೆ ಅವಳಮ್ಮ, ‘ಎಲ್ಲಾ ಬರುತ್ತೆ ಆದ್ರೆ ಏನು ಮಾಡಲ್ಲ. ಮದುವೆಗೆ ಬಂದಿರೋ ಹುಡುಗಿ ಬರದೇ ಇದ್ರೆ ಆಗುತ್ತಾ? ಇವಳಿಗಿಂತ ನೀನು ಒಂದೆರಡು ವರ್ಷ ದೊಡ್ಡೋನಾಗಿದ್ದಿದ್ದರೆ ನಿಂಗೆ ಮದುವೆ ಮಾಡಿಕೊಡ್ತಿದ್ದೆ, ಏನ್ ಮಾಡ್ತ್ಯ ನಿಂಗೆ ಅದೃಷ್ಟ ಇಲ್ಲ’ ಎಂದು ಎಲೆ ಹಾಕಿದ ಕೆಂಪು ಹಲ್ಲು ಕಿರಿಯುತ್ತಾ, ‘ಇಲ್ಲಿ ನೀರು ಕೊಡು’ ಎಂದು ಒಂದು ಲೋಟ ನೀರಲ್ಲಿ ಬಾಯಿ ಮುಕ್ಕಳಿಸಿ, ಬೆರಳಿನಲ್ಲಿ ಹಲ್ಲು ತಿಕ್ಕಿ, ಸಂದುಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಎಲೆಯ ಚೂರು ತೆಗೆದು, ಗಳಗಳ ಶಬ್ದ ಮಾಡುತ್ತಾ ಪಕ್ಕದಲ್ಲಿ ಉಗಿದು, ‘ತೊಗೋಳೇ, ಇವತ್ತು ಸ್ಪೆಷಲ್ ಆಗಿ ಮಾಡಿದ್ದಾನೆ’ ಎಂದು ಟೀ ತೊಗೊಂಡು ಕುಡಿಯತೊಡಗಿದಳು. ಅಷ್ಟರಲ್ಲಿ ಚಂಪಾಳ ಅಪ್ಪ ಹೂವನ್ನು ತೆಗೆದುಕೊಂಡು ಬಂದ. ನೀಲಿ ಬಣ್ಣದ ಪ್ಲಾಸ್ಟಿಕ್ ನೆಲದ ಮೇಲೆ ಹರಡಿ, ಅಳೆದು ಕಟ್ಟಿದ ಹೂವನ್ನ ವೃತ್ತಾಕಾರದಲ್ಲಿ ಜೋಡಿಸಿದ. ‘ನೂರು ಮಾರು ಇದೆ. ಮಾರಿಗೆ ನೂರಕ್ಕೆ ಕಮ್ಮಿ ಮಾರಬೇಡಿ, ನಾನು ಬಿಡಿ ಹೂವು ವ್ಯಾಪಾರ ಮಾಡ್ಕೊಂಡು ಬರ್ತೀನಿ, ಏಳುವರೆ ಎಂಟುಗಂಟೆ ಒಳಗೆ ಎಲ್ಲ ಮಾರಿಬಿಡಿ’ ಎಂದ.

‘ಹೂವ ತೊಗೊಳ್ಳೋಕ್ಕೆ ಕ್ಯೂ ನಿಂತಿದ್ದಾರೆ ನೋಡು’ ಎಂದು ಗೊಣಗಿಕೊಳ್ಳುತ್ತಾ, ಮಂಜನನ್ನ, ‘ಎಷ್ಟು ಓಡುತ್ತಿದೆಯೋ ಒಳಗಡೆ, ಎಷ್ಟಕ್ಕೆ ಕೂಗುತ್ತಿದ್ದಾರೆ’ ಎಂದು ಕೇಳಿ ವಿವರವನ್ನು ಪಡೆದು ತಾನು ಎಷ್ಟಕ್ಕೆ ಕೂಗಬೇಕು ಎಂದು ಯೋಚಿಸುತ್ತ, ಮಗಳಿಗೆ ಎರಡು ದಿನಗಳ ಹಳೆಯ ಹೂವಲ್ಲಿ ಕಟ್ಟಿದ ಮಾರನ್ನು ಕೊಟ್ಟು, ತನ್ನ ಬಳಿ ಹೊಸ ಹೂವಿನ ಹಾರ ಹಿಡಿದು, ‘ಬನ್ನಿ ಅಣ್ಣ, ಅಕ್ಕ ತೊಗೊ ಫ್ರೆಶ್ ಇದೆ, ಬರಿ ನೂರೈವತ್ತು’ ಎಂದಳು ಪುಟ್ಟಮ್ಮ.

‘ತೊಗೊ ಸ್ವಾಮಿ, ದೇವರಿಗೆ ಒಳ್ಳೆ ಹೂವ ಹಾಕು, ದುಡ್ಡಿನ ಮುಖ ನೋಡ್ಬೇಡ.’

‘ಅಯ್ಯೋ ಅಸಲಿಗೆ ಕೊಡ್ತಾಯಿದ್ದೀನಿ, ವ್ಯಾಪಾರ ಇಲ್ಲ, ಮನೆಗೆ ತೊಗೊಂಡು ಹೋಗಿ ಕೊಳೆಸೋದು ಯಾಕೆ ಹೇಳಿ, ತೊಗೊಳ್ಳಿ.’

‘ಲಕ್ಷ್ಮಿ ಪೂಜೆನ ಅಕ್ಕ, ತೊಗೊ ನಂದು ಒಂದು ಮೊಳ ಸೇರಿಸಿ ಕೊಡ್ತೀನಿ ದೇವರಿಗೆ ಹಾಕು.’

‘ತಂದಿರೋದೇ ಮಾರಕ್ಕೆ, ಬಂದ್ರೆ ಕೊಡೋದಿಲ್ವ, ಲಾಸ್ ಆಗುತ್ತೆ ಅಣ್ಣ. ನಮಗೆ ಸಿಗೋದೇ ಐದು ರೂಪಾಯಿ, ಕಟ್ಟಿದ ಕೂಲಿನು ಸಿಗಲ್ಲ.’ ಎಂದು ವಿಧವಿಧವಾಗಿ ಗಿರಾಕಿಗಳನ್ನು ಅಳೆದು ತೂಗಿ ವ್ಯವಹಾರ ಕುದುರಿಸುತ್ತಿದ್ದಳು. ಪಕ್ಕದಲ್ಲಿದ್ದ ಚಂಪಾ ಅಮ್ಮನನ್ನೇ ಅನುಸರಿಸುವಳು, ಅನುಕರಿಸುವಳು.